ವಿಶ್ವವಾಣಿ
ಕೊಡುಗೈ ದಾನಿ ಕೊಟ್ಟೂರೇಶ್ವರ
vishwavani.news
04.03.2024 ಸೋಮವಾರ


# ಹರನ ಆಜ್ಞೆ ಶಿರದಿ ಹೊತ್ತು ಧರೆಗೆ ಬಂದ ಗುರು ಕೊಟ್ಟೂರು ಬಸವೇಶ್ವರ





### ಕಷ್ಟದಲ್ಲಿರುವ ವ್ಯಕ್ತಿಗಳಿಗೆ ಸ್ಪಂದಿಸಿ ಅವರ ನೋವನ್ನು ನಿವಾರಿಸಲು ಶ್ರಮಿಸಿದ ಮಹಾತ್ಮ ಕೊಟ್ಟೂರೇಶ್ವರರು

# ಸಮಾನತೆ ಸಾರಿದ ಗುರು ಕೊಟ್ಟೂರೇಶ್ವರರು

ಉತ್ತರಕರ್ನಾಟಕ ಅದರಲ್ಲಿಯೂ ಐತಿಹಾಸಿಕ ಹಿನ್ನೆಲೆಯುಳ್ಳ ವಿಜಯನಗರ ಸಾಮ್ರಾಜ್ಯದ ಗತವೈಭವ ಕಂಡ ಪುಣ್ಯನೆಲೆ ಹಂಪಿ, ಇದರೊಂದಿಗೆ ಹಲವು ಕ್ಷೇತ್ರಗಳು ಈ ಭಾಗದಲ್ಲಿವೆ.

ಈ ನೆಲದಲ್ಲಿ ಜನಿಸಿ ಸಮಾಜಮುಖಿ ಕಾರ್ಯಗಳಿಂದ ಜನರ ಮನದಲ್ಲಿ ಶಾಶ್ವತವಾಗಿ ನೆಲೆನಿಂತ ಮಹನೀಯರು ಅನೇಕರು. ಜನರರಿಂದ ಪುಣ್ಯ ಪುರುಷರೆಂದು ಕರೆಸಿಕೊಂಡಿದ್ದಾರೆ.

ಇಂತಹ ಅವತಾರ ಪುರುಷರಲ್ಲಿ ಪಂಚಗಣಾಧೀಶ್ವರಲ್ಲಿ ಒಬ್ಬರಾದ ಶ್ರೀ ಕೊಟ್ಟೂರೇಶ್ವರ ಸ್ವಾಮಿಯು ಸಹಾ ಒಬ್ಬರು. ಇವರು ಮಹಾಮಹಿಮರು.

ವ್ಯಕ್ತಿ ತನಗಾಗಿ, ತನ್ನ ಕುಟುಂಬಕ್ಕಾಗಿ, ಸ್ವಾರ್ಥಕ್ಕಾಗಿ ಬದುಕಿದರೆ ಅವನಿಗೆ ಅದೇ ಜನ್ಮ ಕೊನೆ. ಕೆಲವರು ಜೀವಂತವಾಗಿದ್ದಾಗಲೇ ಜನರ ದೃಷ್ಟಿಯಿಂದ ಸತ್ತಂತೆ ಇರುತ್ತಾರೆ. ಆದರೆ ಪರರಿಗಾಗಿ, ಪರರ ನೋವಿಗಾಗಿ, ನೊಂದವರ ನೋವಿನ ಕಣ್ಣೀರನ್ನು ಒರೆಸಲು ಪ್ರಯತ್ನಿಸಿದ ವ್ಯಕ್ತಿ ಅಜರಾಮರಾಗಿ ಅಳಿಯದೇ ಉಳಿದುಬಿಡುತ್ತಾರೆ. ಅವರು ದೈಹಿಕವಾಗಿ ಇಲ್ಲವಾದರೂ ಅವರ ಹೆಸರು ಜನರ ಉಸಿರು ಉಸಿರಿನಲ್ಲೂ ಅಳಿಯದೇ ಚಿರಸ್ಥಾಯಿಯಾಗಿಬಿಡುತ್ತದೆ.

ಪಂಚಗಣಾಧೀಶ್ವರರಲ್ಲಿ ಒಬ್ಬರಾದ ಕೊಟ್ಟೂರೇಶ್ವರರು ಕಷ್ಟದಲ್ಲಿರುವ ವ್ಯಕ್ತಿಗಳಿಗೆ ಸ್ಪಂದಿಸಿ ಅವರ ನೋವನ್ನು ನಿವಾರಿಸಲು ಶ್ರಮಿಸಿದ ಮಹಾತ್ಮ.

ಇವರು ಜಾತಿಗೆ ಅಂಟಿಕೊಳ್ಳದೇ ಜೀವ ಪ್ರೀತಿಗೆ ಅಂಟಿಕೊಂಡು ಮನುಷ್ಯರನ್ನು ಪ್ರೀತಿಯಿಂದ ಅಪ್ಪಿಕೊಂಡಿದ್ದಾರೆ. ತಪ್ಪು ಮಾಡಿದ ವ್ಯಕ್ತಿಗಳನ್ನು ದಂಡನೆಗೆ ಗುರಿಮಾಡಿ ಶಿಕ್ಷಿಸದೇ, ಅವರನ್ನು ತಪ್ಪಿನ ಅರಿವಿನ ಬೆಳಕನ್ನು ನೀಡಿ ಉದ್ದರಿಸಿದ್ದಾರೆ.

ಇಂತಹವರಲ್ಲಿ ಮುಸ್ಲಿಂ ದೊರೆಯಾದ ಅಕ್ಬರ ಮಹಾರಾಜನು ಇವರ ಶಕ್ತಿಗೆ ಮಣಿದು ಮಣಿಮಂಚವನ್ನು ನೀಡಿದ್ದಾನೆ. ಅದು ಇಂದಿಗೂ ಗಚ್ಚಿನ ಮಠದಲ್ಲಿ ವಿರಾಜಮಾನವಾಗಿ ಉಳಿದಿದೆ. ಸಮಾಜದಿಂದ ನಿರ್ಲಕ್ಷ್ಯಕ್ಕೆ ಒಳಗಾಗಿ ಕುಷ್ಟರೋಗದಿಂದ ಬಳಲುತ್ತಿರುವ ವ್ಯಕ್ತಿಯನ್ನು ಪ್ರೀತಿಯಿಂದ ಉಪಚರಿಸಿದ ಇವರ ಮಾತೃವಾತ್ಸಲ್ಯ ಮರೆಯುವಂತಿಲ್ಲ.

ಈಗಿನ ಕೊಟ್ಟೂರಿಗೆ ಮೊದಲಿದ್ದ ಹೆಸರು ಶಿಖಾಪುರ. ಶ್ರೀ ಕೊಟ್ಟೂರೇಶ್ವರರು ಶಿಖಾಪುರದಲ್ಲಿ ನೆಲಸಿ ಜನರು ಬೇಡಿದ ವರಗಳನ್ನು ಕೊಡುವ ಊರು ಕೊಟ್ಟೂರು ಆಗಿದೆ ಎನ್ನುತ್ತಾರೆ. ಶ್ರೀ ಕೊಟ್ಟೂರೇಶ್ವರ ಸ್ವಾಮಿಯು ಊರೂರು ಸಂಚರಿಸುತ್ತಾ, ಶಿಖಾಪುರಕ್ಕೆ ಬಂದಾಗ ರಾತ್ರಿ ಸಮಯವಾದ್ದರಿಂದ ಆಗ ಶಿಖಾಪುರದಲ್ಲಿ ನೆಲೆಸಿದ್ದ ಶ್ರೀ ವೀರಭದ್ರೇಶ್ವರ ಸ್ವಾಮಿಯ ಬಳಿ ಬಂದು ತಂಗಲು ಸ್ವಲ್ಪ ಸ್ಥಳವನ್ನು ಕೇಳಲಾಗಿ, ಶ್ರೀ ವೀರಭದ್ರೇಶ್ವರರು ತಮ್ಮ ಆಸ್ಥಾನದಲ್ಲಿ ಮಲಗಲು ಸ್ಥಳವನ್ನು ನೀಡುತ್ತಾರೆ. ಬೆಳಗಾಗುವ ಹೊತ್ತಿಗೆ ಸಂಪೂರ್ಣವಾಗಿ ಆಸ್ಥಾನವನ್ನು ಆವರಿಸಿ, ನನಗೆ ಸ್ಥಳ ವಿಲ್ಲದಾಗಿದೆ ಎಂದು ಶ್ರೀ ವೀರಭದ್ರ ಸ್ವಾಮಿ ಕೊಟ್ಟೂರೇಶ್ವರ ಸ್ವಾಮಿಯನ್ನು ಕೇಳಲಾಗಿ, ನಿನ್ನ ಸ್ಥಳವನ್ನು ನನಗೆ ಕೊಡು, ನೀನು ಕೊಡದಗುಡ್ಡಕ್ಕೆ ಹೋಗಿ ನೆಲೆಸು ಹಾಗು ಆ ಸ್ಥಳವನ್ನು ಯಾರಿಗೂ ಕೊಡಬಾರದು. ಆ ಕ್ಷೇತ್ರವು ''ಕೊಡದಗುಡ್ಡ'' ಎಂದು ಪ್ರಖ್ಯಾತವಾಗುತ್ತದೆ. ನೀನು ನನಗೆ ಸ್ಥಳ ಕೊಟ್ಟ ಕಾರಣ ಈ ''ಶಿಖಾಪುರ'' ಮುಂದೆ ''ಕೊಟ್ಟೂರು'' ಎಂದು ಪ್ರಖ್ಯಾತವಾಗಲಿ ಎಂದು ಹರಿಸಿದರಂತೆ. ಅಂದಿನಿಂದ ಶಿಖಾಪುರ ಕೊಟ್ಟೂರಾಗಿ ಪ್ರಖ್ಯಾತವಾಗಿದೆ.

ಶ್ರೀ ಕೊಟ್ಟೂರೇಶ್ವರರು ಜನರ ನೋವುಗಳಿಗೆ, ದು:ಖಗಳಿಗೆ, ಕಷ್ಟಗಳಿಗೆ ಸ್ಪಂದಿಸಿ ಅವರಿಗೆ ಸಹಾಯ ಹಸ್ತವನ್ನು ನೀಡಿ ಅವರ ಭಯವನ್ನು ನಿವಾರಿಸಿ ಅಭಯವನ್ನು ನೀಡುತ್ತಾ, ಸನ್ಮಾರ್ಗದಲ್ಲಿ ನಡೆಯುವಂತೆ ಜನರಿಗೆ ಧರ್ಮ ಮಾರ್ಗವನ್ನು ತೋರಿಸಿದ್ದರಿಂದ ಜನರ ಮನದಲ್ಲಿ ಅವರು ಶಾಶ್ವತವಾಗಿ ಉಳಿದಿದ್ದಾರೆ.

ಜನರಲ್ಲಿ ಭೇದವನ್ನು ಎಣಿಸದೇ ಎಲ್ಲರನ್ನೂ ಪ್ರೀತಿಯಿಂದ ನೋಡುತ್ತಾ, ಅವರ ಇಷ್ಟಾರ್ಥಗಳನ್ನು ಈಡೇರಿಸುತ್ತಾ ಬಂದಿದ್ದರಿಂದ ಕಾಲಾನಂತರ ಜನರು ಅವರಿಗೆ ಭಕ್ತಿಭಾವದಿಂದ ಕೃತಜ್ಞತೆಯನ್ನು ಅರ್ಪಿಸುತ್ತಾ ಬಂದು, ಮುಂದೆ ಪವಾಡ ಪುರುಷರಾಗಿ ಶಾಶ್ವತವಾಗಿ ಉಳಿದಿದ್ದಾರೆ. ಇಂತಹ ಮಹಾಮಹಿರ ಜಾತ್ರಾ ಮಹೋತ್ಸವಕ್ಕೆ ನೂರಾರು ಕಿ.ಮೀ. ದೂರದ ಊರುಗಳಿಂದ ಸುಡು ಬಿಸಿಲನ್ನು ಲೆಕ್ಕಿಸದೇ ಜನರು ಪಾದಯಾತ್ರೆಯ ಮೂಲಕ ದೇಹವನ್ನು ದಂಡಿಸುತ್ತಾ, ಹರ್ಷದಿಂದ ತಮ್ಮ ಭಕ್ತಿಯ ಸೇವೆಯನ್ನು ಅರ್ಪಿಸುತ್ತಿದ್ದಾರೆ. ಭಕ್ತಿಯಲ್ಲಿ ಮಿಂದೆದ್ದ ಜನ ಪ್ರತಿವರ್ಷ ಬರುವುದಾಗಿ ಹರಕೆ ಹೊತ್ತಿದ್ದೇವೆ, ಬಾರದೇ ಇದ್ದರೆ ಹರಕೆ ಅಪೂರ್ಣವಾಗುತ್ತದೆ ಎನ್ನುವ ಕಾರಣಕ್ಕೆ ಬಂದಿದ್ದೇವೆ ಎಂದು ಪಾದಯಾತ್ರಿಗಳು ಹೇಳುವುದನ್ನು ನೋಡಿದರೆ ಭಕ್ತರಲ್ಲಿ ಭಕ್ತಿಯ ಬರ ಇಲ್ಲವೆಂಬಂತೆ ಪಾದಯಾತ್ರೆಯ ಮೂಲಕ ಆಗಮಿಸುತ್ತಿರುವುದು, ದಾರಿಯ ಉದ್ದಗಲಕ್ಕೂ ಪ್ರತಿಯೊಂದು ಊರುಗಳಲ್ಲಿ ಅವರಿಗೆ ಪ್ರಸಾದ, ಕುಡಿಯುವ ನೀರು, ಎಳೆನೀರು,



ಮಜ್ಜಿಗೆ, ಹಣ್ಣು ಹಂಪಲು ನೀಡಿ ಸತ್ಕರಿಸುವುದು ನಾಡಿನ ಸಂಸ್ಕೃತಿಯನ್ನು ತೋರಿಸುತ್ತಿದೆ. ಹೆತ್ತತಾಯಿಯನ್ನು ಮನೆಯಲ್ಲಿ ಬಿಟ್ಟು ಹೋಗುವ, ಇಲ್ಲವೇ ವೃದ್ಧಾಶ್ರಮಕ್ಕೆ ದೂಡುವ ಇಂದಿನ ನಾವೆಲ್ಲಿ, ಮಕ್ಕಳಿಲ್ಲೆಂದು ಕೊರಗುತ್ತಿದ್ದ ನೆಂಬಕ್ಕನಿಗೆ ಸ್ವತ: ಮಗನಾಗಿ, ಮಕ್ಕಳಿಲ್ಲ ಎನ್ನುವ ನೋವನ್ನ ನೀಗಿಸಿ ಆ ತಾಯಿಯ ಮುಖದಲ್ಲಿ ಸಂತೋಷವನ್ನು ತಂದ ಕೊಟ್ಟೂರೇಶ್ವರರು ಶ್ರೇಷ್ಠರಾಗುತ್ತಾರೆ.

ಸಂತರು, ಶರಣರು ಈ ಲೋಕದ ಕಣ್ಣಿಗೆ ಹುಚ್ಚರಂತೆ ಕಾಣುತ್ತಿರುತ್ತಾರೆ. ಏಕೆಂದರೆ ಅವರು ಅಂತರ್ಮುಖಿಗಳಾಗಿ ಚಿಂತಿಸುತ್ತಾ, ಲೋಕದ ನೋವನ್ನು ಕಳೆಯುತ್ತಿರುತ್ತಾರೆ. ಅದೇ ರೀತಿ ಶ್ರೀ ಕೊಟ್ಟೂರೇಶ್ವರರು ಸಹ ಜನರ ದೃಷ್ಟಿಯಲ್ಲಿ ಹುಚ್ಚರಂತೆ ಕಂಡುಬಂದು, ಜನರಲ್ಲಿನ ಮೋಹದ, ಲೋಭದ, ಕಾಮದ ಹುಚ್ಚನ್ನು ಬಿಡಿಸುವ ವೈದ್ಯರಾಗಿ ಕಂಗೊಳಿಸಿದ್ದಾರೆ.








